
# ಭಗವದ್ರೂಪಗಳು



ಅರ್ಜುನ ಶ್ರೀಕೃಷ್ಣನನ್ನು ಸ್ತೋತ್ರ ಮಾಡಿದ: ''ನೀನು ಪೂರ್ಣಬ್ರಹ್ಮ'' ಎಂಬುದಾಗಿ. ಶ್ರೀಕೃಷ್ಣ ಹೇಳಿದ: ''ನಾನು ಪೂರ್ಣಬ್ರಹ್ಮ ಹೌದೋ ಅಲ್ಲವೋ ಎಂಬುದನ್ನು ನೋಡುವೆಯಂತೆ, ಬಾ ನನ್ನೊಡನೆ.'' ಹೀಗೆಂದು ಹೇಳಿ ಒಂದು ಜಾಗಕ್ಕೆ ಕರೆದುಕೊಂಡು ಹೋಗಿ ಆತನನ್ನು ಕೇಳಿದ: ''ಅಲ್ಲಿ ಏನನ್ನು ನೋಡುತ್ತಾ ಇದ್ದೀಯೆ?'' ಅರ್ಜುನ ಹೇಳಿದ: ''ಅಲ್ಲಿ ನಾನು ಒಂದು ದೊಡ್ಡ ಮರ ನೋಡುತ್ತಿದ್ದೇನೆ, ಅದರಲ್ಲಿ ನೇರಳೆ ಹಣ್ಣಿನಂಥ ಕಪ್ಪು ಹಣ್ಣುಗಳು ಜೊಂಪೆ ಜೊಂಪೆಯಾಗಿ ನೇತಾಡುತ್ತಿವೆ.'' ಬಳಿಕ ಕೃಷ್ಣ ಹೇಳಿದ: 'ಇನ್ನೂ ಹತ್ತಿರಕ್ಕೆ ಬಂದು ನೋಡು. ಅವು ಕಪ್ಪು ಹಣ್ಣುಗಳ ಜೊಂಪೆಗಳಲ್ಲ, ನನ್ನಂಥ ಕೃಷ್ಣರ ಜೊಂಪೆಗಳು. ಅಸಂಖ್ಯವಾಗಿ ನೇತಾಡುತ್ತಿವೆ.' ಅಂದರೆ ಪೂರ್ಣಬ್ರಹ್ಮಸ್ವರೂಪದ ವೃಕ್ಷದಿಂದ ಅಸಂಖ್ಯ ಅವತಾರಗಳು ಬಂದು ಹೋಗುತ್ತಿವೆ.

ಭಗವಂತನ ಕಡೆಗೆ ಮುಂದುವರಿದಂತೆಲ್ಲ ಆತನ ಐಶ್ವರ್ಯ ಕಡಮೆ ಕಡಮೆಯಾಗಿ ಕಂಡುಬರಲಾರಂಭಿಸುತ್ತದೆ. ಸಾಧಕನಿಗೆ ಮೊತ್ತಮೊದಲು ದೊರೆಯುತ್ತದೆ, ಹತ್ತು ಭುಜಗಳುಳ್ಳ ಭಗವತಿಯ ದರ್ಶನ. ಆ ಮೂರ್ತಿಯಲ್ಲಿ ಐಶ್ವರ್ಯ ಬಹಳವಾಗಿ ವ್ಯಕ್ತವಾಗಿರುತ್ತದೆ. ಅನಂತರ ಎರಡು ಭುಜಗಳುಳ್ಳ ದೇವಿಯ ದರ್ಶನ. ಮೂರ್ತಿಗೆ ವಿವಿಧ ಅಸ್ತ್ರಶಸ್ತ್ರಗಳನ್ನು ಹಿಡಿದಿರುವ ಹತ್ತು ಕೈಗಳಿರುವುದಿಲ್ಲ. ಬಳಿಕ ಗೋಪಾಲಮೂರ್ತಿಯ ದರ್ಶನ ದೊರೆಯುತ್ತದೆ. ಅದರಲ್ಲಿ ಯಾವ ಐಶ್ವರ್ಯವೂ ಇರುವುದಿಲ್ಲ. ಅದೇ ಕೇವಲ ಹಾಲು ಹಸುಳೆಯ ಮೂರ್ತಿ. ಇವುಗಳಿಂದಾಚೆಗೂ ಕೆಲವು ದರ್ಶನಗಳಾಗುತ್ತವೆ. ಬಳಿಕ ಸಾಧಕನಿಗೆ ಕೇವಲ ಜ್ಯೋತಿಯ ದರ್ಶನ ಆಗುತ್ತದೆ.

ತಂದೆಯ ಭಾವಚಿತ್ರ ತಂದೆಯನ್ನು ಜ್ಞಾಪಕಕ್ಕೆ ತರುವಂತೆ, ಪ್ರತಿಮಾಪೂಜೆ ಮಾಡುತ್ತ ಮಾಡುತ್ತ ಮುಂದುವರಿದರೆ ಸತ್ಯದ ರೂಪ ಉದ್ದೀಪನವಾಗುತ್ತದೆ.

ಸಾಕಾರ ರೂಪ ಹೇಗೆ ಗೊತ್ತೆ? ಜಲರಾಶಿಯ ಮಧ್ಯದಿಂದ ಗುಳ್ಳೆಗಳು ಏಳುವಂತೆ, ಮಹಾ ಚಿದಾಕಾಶದಿಂದ ಒಂದೊಂದು ಭಗವದ್ರೂಪ ಏಳುವುದನ್ನು ನೋಡಬಹುದು. ಅವತಾರ ಈ ರೂಪಗಳಲ್ಲಿ ಒಂದು. ಅವತಾರ ಲೀಲೆ, ಆ ಆದ್ಯಾಶಕ್ತಿಯ ಕ್ರೀಡೆಯೇ.

ಯಾವ ಮೂರ್ತಿಯ ಮೇಲೆ ಧ್ಯಾನ ಮಾಡಬೇಕು ಎಂಬುದಾಗಿ ನೀವು ಕೇಳುವುದಾದರೆ, ನನ್ನ ಉತ್ತರ: ''ಯಾವ ಮೂರ್ತಿ ನಿಮಗೆ ಹಿಡಿಸುತ್ತದೋ ಅದರ ಮೇಲೆ''; ಆದರೆ ಎಲ್ಲಾ ಮೂರ್ತಿಗಳೂ ಒಂದೇ ಭಗವಂತನ ವಿವಿಧ ರೂಪ ಎಂಬುದನ್ನು ಮಾತ್ರ ಚೆನ್ನಾಗಿ ಮನಸ್ಸಿಗೆ ಒತ್ತಿ ತಿಳಿಸಿ.

ಯಾರ ಮೇಲೂ ದ್ವೇಷ ಇಟ್ಟುಕೊಂಡಿರಕೂಡದು. ಶಿವ, ಕಾಳಿ, ಹರಿ, ಎಲ್ಲರೂ ಒಂದೇ ಭಗವಂತನ ಭಿನ್ನ ಭಿನ್ನ ರೂಪ ಮಾತ್ರ. ಇದನ್ನು ಯಾರು ಅರಿತುಕೊಂಡಿದ್ದಾನೋ ಆತನೇ ಧನ್ಯ.

ಭಗವಂತನಿಗೆ ಅನೇಕ ರೂಪಗಳಿವೆ: ಅವನು ಬಗೆಬಗೆಯಾಗಿ ಕ್ರೀಡಿಸುತ್ತಾನೆ. ಭಗವಲ್ಲೀಲೆ, ದೇವಲೀಲೆ, ನರಲೀಲೆ, ಜಗಲ್ಲೀಲೆ ಇತ್ಯಾದಿಯಾಗಿ. ಆತ ಮನುಷ್ಯನ ರೂಪ ಧರಿಸಿ, ಎಂದರೆ ಅವತಾರವೆತ್ತಿ ಪ್ರೇಮ ಮತ್ತು ಭಕ್ತಿಯನ್ನು ಹರಡಲೋಸುಗ ಪ್ರತಿಯೊಂದು ಯುಗದಲ್ಲೂ ಈ ಧರೆಗೆ ಬರುತ್ತಾನೆ. ಉದಾಹರಣೆಗೆ ಚೈತನ್ಯದೇವನನ್ನು ನೋಡು. ಕೇವಲ ಅವತಾರಪುರುಷರ ಮೂಲಕವೇ ಭಗವದ್ಭಕ್ತಿ ಮತ್ತು ಪ್ರೇಮ ಏನು ಎಂಬುದರ ರುಚಿ ನೋಡಬಹುದು. ಭಗವಂತನ ಲೀಲೆ ಅನಂತ ಬಗೆಯಾದದ್ದು, ಆದರೆ ನಮಗೆ ಬೇಕಾದದ್ದು ಪ್ರೇಮಾ ಭಕ್ತಿ. ನಮಗೆ ಕೇವಲ ಹಾಲು ಮಾತ್ರ ಬೇಕು. ಹಾಲು ಹಸುವಿನ ಕೆಚ್ಚಲಿನಿಂದ ಬರುತ್ತದೆ. ಅವತಾರಪುರುಷ ಹಸುವಿನ ಕೆಚ್ಚಲು.

ಭಗವದ್ರೂಪಗಳನ್ನು ಒಪ್ಪಿಕೊಳ್ಳಬೇಕು. ಜಗದ್ಧಾತ್ರಿ ರೂಪದ ಸಂಕೇತ ನಿನಗೆ ಗೊತ್ತೆ? ಯಾರು ಈ ಜಗತ್ತನ್ನು ಧಾರಣೆ ಮಾಡಿಕೊಂಡಿದ್ದಾಳೋ ಅವಳು. ಆಕೆ ಈ ಜಗತ್ತನ್ನು ಹೊತ್ತುಕೊಂಡಿರದಿದ್ದರೆ, ಪಾಲಿಸದಿದ್ದರೆ ಅದು ತನ್ನ ಸ್ಥಾನದಿಂದ ಕೆಳಕ್ಕೆ ಬಿದ್ದು ನಾಶವಾಗಿ ಬಿಡುತ್ತದೆ. ಮನಸ್ಸೆಂಬ ಆನೆಯನ್ನು ಯಾರು ವಶಪಡಿಸಿಕೊಳ್ಳುತ್ತಾನೋ ಆತನ ಹೃದಯದಲ್ಲಿ ಆಕೆ ವ್ಯಕ್ತವಾಗುತ್ತಾಳೆ.

ಪ್ರಶ್ನೆ: ಕಾಳಿಗೆ ಈ ಕಪ್ಪು ಬಣ್ಣ ಏಕೆ ಬಂತು?

ಶ್ರೀರಾಮಕೃಷ್ಣರು: ನೀನು ಆಕೆಯಿಂದ ಬಹಳ ದೂರದಲ್ಲಿರುವುದರಿಂದ ನಿನಗೆ ಆಕೆ ಕಪ್ಪಾಗಿ ಕಾಣುತ್ತಿದ್ದಾಳೆ. ಹತ್ತಿರ ಹೋಗಿ ನೋಡು, ಯಾವ ಬಣ್ಣವೂ ಇಲ್ಲ. ಆಕಾಶ ದೂರಕ್ಕೆ ನೀಲವರ್ಣದ್ದಾಗಿ ಕಾಣುತ್ತದೆ. ನಿನ್ನ ಹತ್ತಿರವಿರುವ ಆಕಾಶವನ್ನು ನೋಡು, ಅದಕ್ಕೆ ಯಾವ ಬಣ್ಣವೂ ಇಲ್ಲ. ಭಗವಂತನ ಹತ್ತಿರ ಹತ್ತಿರ ಬಂದಷ್ಟೂ ಅನುಭವವಾಗುತ್ತದೆ – ಆತನಿಗೆ ನಾಮ, ರೂಪ, ಯಾವುದೂ ಇಲ್ಲ ಎಂಬುದಾಗಿ. ಭಗವತಿಯನ್ನು ಬಿಟ್ಟು ಬಹಳ ದೂರಕ್ಕೆ ಮುಂದುವರಿದರೆ ಹುಲ್ಲು ಹೂವಿನ ಬಣ್ಣದ ಹಾಗೆ ನೀಲಿಯಾಗಿ ಕಾಣುತ್ತಾಳೆ.

ನೀನು ಭಗವದ್ರೂಪದಲ್ಲಿ ಶ್ರದ್ಧೆಯಿಡು. ಬ್ರಹ್ಮಜ್ಞಾನ ದೊರೆತ ನಂತರ ಮಾತ್ರ ಅಭೇದ ಜ್ಞಾನ – ಬ್ರಹ್ಮನಿಗೂ ಶಕ್ತಿಗೂ ಅಭೇದ ಎಂಬ ಜ್ಞಾನ ಉಂಟಾಗುತ್ತದೆ. ಬೆಂಕಿ, ಅದರ ಸುಡುವ ಶಕ್ತಿ ಅನನ್ಯವಾಗಿರುವ ಹಾಗೆ ಬ್ರಹ್ಮ, ಆತನ ಶಕ್ತಿ ಅನನ್ಯ.

–ಶ್ರೀರಾಮಕೃಷ್ಣ ವಚನವೇದದಿಂದ

# ‘ಅನ್ಯಥಾ ಶರಣಂ ನಾಸ್ತಿ..’

## ಶರಣಾಗತಿಯ ವೈಭವ

– ಶಶಿಕಲಾ ಶ್ರೀಧರ್

**ಪ್ರಶ್ನೆ:** ಶರಣಾಗತಿ ಎಂದರೆ ಏನು?

**ಉತ್ತರ:** ರಕ್ಷಿಸಲು ಸಮರ್ಥನೂ ಕರುಣಾಳುವೂ ಆದವನನ್ನು ನಿಷ್ಠೆಯಿಂದ, ವಿಶ್ವಾಸಪೂರ್ವಕವಾಗಿ ಆಶ್ರಯಿಸಿ, ಅವನ ಇಚ್ಛೆಗೆ ಸಂಪೂರ್ಣವಾಗಿ ನಮ್ಮನ್ನು ನಾವು ಒಪ್ಪಿಸಿಕೊಳ್ಳುವುದೇ ಶರಣಾಗತಿ.

**ಪ್ರಶ್ನೆ:** ಶರಣಾಗತಿಯನ್ನು ಯಾರು ಮಾಡಬೇಕು?

**ಉತ್ತರ:** ತನ್ನ ಇಷ್ಟಾರ್ಥಸಿದ್ಧಿಯು ಬೇರಾವ ಉಪಾಯದಿಂದಲೂ ಕೈಗೂಡುವುದಿಲ್ಲ, ಆದರೆ ಇದರಿಂದ ನಿಸ್ಸಂಶಯವಾಗಿ ಸಿದ್ಧಿಸುತ್ತದೆ ಎಂಬ ದೃಢವಾದ ನಂಬಿಕೆ ಇರುವವನು ಶರಣಾಗತಿ ಮಾಡಬೇಕು.

**ಪ್ರಶ್ನೆ:** ಶರಣಾಗತಿಯನ್ನು ಯಾರಲ್ಲಿ ಮತ್ತು ಏತಕ್ಕೆ ಮಾಡಬೇಕು?

**ಉತ್ತರ:** ಶರಣು ನೀಡುವ ಹಾಗೂ ಶರಣಾಗತನನ್ನು ಸರ್ವವಿಧದಿಂದಲೂ ರಕ್ಷಿಸುವ ಶಕ್ತಿ-ಸಾಮರ್ಥ್ಯ ಇರುವವನಲ್ಲಿ ಹಾಗೂ ದಯಾಪೂರಿತ ಸತ್ಯಸಂಕಲ್ಪ ಉಳ್ಳವನಲ್ಲಿ ಶರಣಾಗತಿ ಮಾಡಬೇಕು. ಇದನ್ನು ಧರ್ಮ, ಅರ್ಥ, ಕಾಮ, ಮೋಕ್ಷ ಎಂಬ ಯಾವುದೇ ಪುರುಷಾರ್ಥ ಸಿದ್ಧಿಗಾಗಿ ಮಾಡಬಹುದು.

ಹೀಗೆ ಯಾವುದೇ ಇಷ್ಟ ಸಿದ್ಧಿಗಾಗಿ ಶರಣಾಗತಿ ಮಾಡಬಹುದಾದರೂ ಮೋಕ್ಷವೆಂಬ ಪುರುಷಾರ್ಥಕ್ಕಾಗಿ ಪರಮಾತ್ಮನನ್ನು ಶರಣು ಹೊಂದುವುದು ಅತ್ಯಂತ ಉತ್ತಮ ಶರಣಾಗತಿ. ಇಂತಹ ಭಕ್ತಿಭರಿತ ಪ್ರಪತ್ತಿಯನ್ನು ಭಗವಂತನಲ್ಲಿ ಮಹಾವಿಶ್ವಾಸದಿಂದ ಒಮ್ಮೆ ಮಾಡಿದರೂ ಸಾಕು, ಪರಮಾತ್ಮನು ಈ ಪ್ರಪನ್ನನನ್ನು ರಕ್ಷಿಸುವ ಹೊಣೆಯನ್ನು ಸಂಪೂರ್ಣವಾಗಿ ಹೊತ್ತು ನಿರ್ವಹಿಸುತ್ತಾನೆ.

ಈ ಶರಣಾಗತಿಯನ್ನು ಮಾಡುವ ವಿಧಾನಗಳಲ್ಲಿ ಮೂರು ಬಗೆಯ ವಿಧಾನಗಳನ್ನು ಭಾಗವತರು ಪಾರಿಭಾಷಿಕವಾಗಿ ವರ್ಣಿಸುತ್ತಾರೆ: ೧. ಸ್ವನಿಷ್ಠೆ ೨. ಉಕ್ತನಿಷ್ಠೆ ೩. ಆಚಾರ್ಯನಿಷ್ಠೆ.

**೧. ಸ್ವ-ನಿಷ್ಠೆ ಅಥವಾ ಆತ್ಮ ನಿಷ್ಠೆ :** ಪ್ರಪತ್ತಿಯನ್ನು ತನ್ನ ಸಾಮರ್ಥ್ಯಕ್ಕೆ ಅನುಗುಣವಾಗಿ ತಾನೇ ನೇರವಾಗಿ ಭಗವಂತನಲ್ಲಿ ಮಾಡಿಕೊಳ್ಳಬಹುದು.

**೨. ಉಕ್ತ ನಿಷ್ಠೆ :** ಜ್ಞಾನಿಗಳಾದ ಆಚಾರ್ಯರು ಉಪದೇಶಿಸಿದ ರೀತಿಯಲ್ಲಿ ಭಗವಂತನಲ್ಲಿ ಶರಣಾಗತಿ ಹೊಂದಬಹುದು.

**೩. ಆಚಾರ್ಯ ನಿಷ್ಠೆ :** ಆಚಾರ್ಯನೇ ಶಿಷ್ಯನ ಪರವಾಗಿ ಭಗವಂತನಲ್ಲಿ ಪ್ರಪತ್ತಿ ಮಾಡಿದಾಗ, ಶಿಷ್ಯನಿಗೆ ಆಚಾರ್ಯನಲ್ಲಿ ಸಂಪೂರ್ಣ ನಿಷ್ಠೆ ಇದ್ದರೆ ಶರಣಾಗತಿ ಕೈಗೂಡುವುದು.

> ಭಗವಂತನನ್ನು ಒಲಿಸಿಕೊಳ್ಳಲು ಅತ್ಯಂತ ಸುಲಭವಾದ ಮಾರ್ಗವೇ ಭಕ್ತಿ. ಹಲವು ಬಗೆಯ ಭಕ್ತಿಯ ಆಚರಣೆಗಳಲ್ಲಿ ಶರಣಾಗತಿಯು ಅತ್ಯುತ್ಕೃಷ್ಟವಾದುದು. ಏಕೆಂದರೆ ಇದರಿಂದ ಭಕ್ತನ ಹೊಣೆಯನ್ನು ಭಗವಂತನೇ ವಹಿಸಿಕೊಳ್ಳುವನು. ಶಾಸ್ತ್ರಗಳ ಹಾಗೂ ಭಕ್ತಿಪರಂಪರೆಯ ದೃಷ್ಟಿಯಿಂದ ಶರಣಾಗತಿಯನ್ನು ಹೊಂದುವ ಬಗೆಯನ್ನಿಲ್ಲಿ ವಿವರಿಸಿರುವ ಲೇಖಕಿ, ಬೆಂಗಳೂರು ರಾಮಕೃಷ್ಣ ಮಠದ ಭಕ್ತರು. ಅವರು ಸಂಸ್ಕೃತ, ಸಂಗೀತ ಕ್ಷೇತ್ರಗಳಲ್ಲಿ ನುರಿತವರು; ಅನೇಕ ಆಧ್ಯಾತ್ಮಿಕ ಗ್ರಂಥಗಳನ್ನು ಆಳವಾಗಿ ಅಧ್ಯಯನ ಮಾಡಿದ್ದಾರೆ.

ಪ್ರಪನ್ನನು ತನಗೋಸ್ಕರವಾಗಿ ಮಾತ್ರವಲ್ಲದೆ ತನ್ನವರಿಗಾಗಿಯೂ ಪರಮಾತ್ಮನನ್ನು ಪ್ರಾರ್ಥಿಸಬಹುದು. ಇಂತಹ ಪ್ರಪತ್ತಿಯಿಂದ ತನ್ನವರ ರಕ್ಷಣೆಯನ್ನು ಮಾಡಿದ ಸನ್ನಿವೇಶಗಳುಂಟು.

ಶರಣಾಗತಿಯ ಲಕ್ಷಣಗಳು ಆರು.

ಶ್ರೀ ಶ್ರೀನಿವಾಸಾಚಾರ್ಯರ ***‘ಯತೀಂದ್ರಮತದೀಪಿಕೆ’*** ಯು ಶರಣಾಗತಿಯ ಆರು ಲಕ್ಷಣಗಳನ್ನು ಹೀಗೆ ವಿವರಿಸುತ್ತದೆ.

**ಆನುಕೂಲ್ಯಸ್ಯ ಸಂಕಲ್ಪಃ ಪ್ರಾತಿಕೂಲ್ಯಸ್ಯ ವರ್ಜನಮ್ ।**
**ರಕ್ಷಿಷ್ಯತೀತಿ ವಿಶ್ವಾಸಃ ಗೋಪ್ತೃತ್ವ ವರಣಂ ತಥಾ ।**
**ಆತ್ಮನಿಕ್ಷೇಪಕಾರ್ಪಣ್ಯೇ ಷಡ್ವಿಧಾ ಶರಣಾಗತಿಃ ॥**

**೧. ಆನುಕೂಲ್ಯಸ್ಯ ಸಂಕಲ್ಪಃ :** ಪ್ರಪನ್ನನಾದವನು ಪರಮಾತ್ಮನಿಗೆ ಅನುಕೂಲವಾಗಿ ಅವನಿಗೆ ಯಾವುದು ಪ್ರಿಯವೋ ಮತ್ತು ಅವನ ಆಜ್ಞೆ ಮತ್ತು ಅನುಜ್ಞೆಯ ರೂಪವಾದ ಯಾವ ನಿಯಮಗಳಿರುವವೋ ಅವನ್ನು ಪಾಲಿಸುತ್ತೇನೆ ಎಂಬುದಾಗಿ ಸಂಕಲ್ಪ ಮಾಡಬೇಕು.

**೨. ಪ್ರಾತಿಕೂಲ್ಯಸ್ಯ ವರ್ಜನಂ :** ಭಗವತ್ಪ್ರಾಪ್ತಿಗೆ ಪ್ರತಿಕೂಲವಾದ ವಸ್ತು ಅಥವಾ ವ್ಯಕ್ತಿ ಯಾವುದೇ ಆದರೂ ಅದನ್ನು ಅಗತ್ಯವಾಗಿ ತ್ಯಜಿಸುತ್ತೇನೆ ಎಂದು ಪ್ರತಿಜ್ಞೆ ಮಾಡಬೇಕು.

**೩. ರಕ್ಷಿಷ್ಯತೀತಿ ವಿಶ್ವಾಸಃ :** ಶರಣಾಗತರನ್ನು ಪರಮಾತ್ಮನು ಎಂದೆಂದೂ ರಕ್ಷಿಸುವನೆಂಬ ದೃಢನಂಬಿಕೆ ಹೊಂದಿರಬೇಕು.

**೪. ಗೋಪ್ತೃತ್ವ ವರಣಂ ತಥಾ :** ‘ಪರಮಾತ್ಮನೇ ಗತಿ’ ಎಂಬ ನಿಸ್ಸಂಶಯವಾದ ಸ್ಥಿರತೆಯಿಂದ, ಪರಮಾತ್ಮನು ತನ್ನನ್ನು ಸ್ವೀಕರಿಸಿದ್ದಾನೆ ಎಂಬ ಭರವಸೆಯಿಂದ, ‘ನೀನೇ ನನ್ನನ್ನು ರಕ್ಷಿಸಬೇಕು’ ಎಂದು ಅವನಲ್ಲಿ ಮೊರೆಯಿಡಬೇಕು.



**೫. ಆತ್ಮನಿಕ್ಷೇಪ :** ಭಗವಂತನಲ್ಲಿ ತನ್ನನ್ನು ತಾನು ಸಂಪೂರ್ಣವಾಗಿ ಸಮರ್ಪಿಸಿಕೊಳ್ಳುವುದು.

**೬. ಕಾರ್ಪಣ್ಯಂ:** ತನ್ನ ರಕ್ಷಣೆಯನ್ನು ಮಾಡಿಕೊಳ್ಳಲು ತಾನು ಅಸಮರ್ಥ, ಅಕಿಂಚನ ಎಂಬ ಭಾವನೆಯಿಂದ ಭಕ್ತನು ಭಗವಂತನ ಮುಂದೆ 'ದೀನ'ನಾಗಿರುವುದು.

ಈ ಆರು ವಿಧದ ಶರಣಾಗತಿಯ ಲಕ್ಷಣಗಳನ್ನು ಸಂತರು, ದಾಸವರೇಣ್ಯರು ತಮ್ಮ ಅಪೂರ್ವ ಕೃತಿಗಳಲ್ಲಿ ಯಾವ ರೀತಿ ವಿವರಿಸುತ್ತಾರೆ ಎಂಬುದನ್ನು ವಿಚಾರ ಮಾಡೋಣ.

**೧. ಆನುಕೂಲ್ಯಸ್ಯ ಸಂಕಲ್ಪಃ** ಯಾವ ರೀತಿಯ ಸಂಕಲ್ಪ ಮಾಡಿಕೊಳ್ಳಬೇಕು? 'ಭಗವಂತನಿಗೆ ಅಪ್ರಿಯವಾದುದು ಯಾವುದನ್ನೂ ನಾನು ಮಾಡುವುದಿಲ್ಲ, ಭಗವತ್ಪ್ರಾಪ್ತಿಗೆ ಅನುಕೂಲವಾಗುವಂತಹ ಜೀವನ ಶೈಲಿಯನ್ನು ರೂಪಿಸಿಕೊಳ್ಳುತ್ತೇನೆ' ಎಂಬುದಾಗಿ ಸಂಕಲ್ಪ ಮಾಡಿಕೊಳ್ಳಬೇಕು. ಹಾಗಾದರೆ ಈ ಜೀವನ ಶೈಲಿ ಹೇಗಿರಬೇಕು? ವೇದೋಪನಿಷತ್ತು ಹಾಗೂ ಪುರಾಣ, ಶಾಸ್ತ್ರಗಳ ಮೂಲಕ ನಮಗೆ ಕರುಣಿಸಲ್ಪಟ್ಟಿರುವ ಶ್ರೀಹರಿಯ ಆಜ್ಞಾರೂಪವಾದ ವಾಕ್ಕುಗಳಲ್ಲಿ ಅಚಲ ಶ್ರದ್ಧೆಯನ್ನಿಟ್ಟುಕೊಂಡು, ಅವುಗಳನ್ನು ಅನುಷ್ಠಾನಕ್ಕೆ ತರುವುದರಿಂದ ನಾವು ಭಗವಂತನಿಗೆ ಅನುಕೂಲರಾಗುವೆವು.

ಭಗವಂತನಿಗೆ ಅನುಗುಣವಾಗಿ ಸವೆಸಬೇಕಾದ ಜೀವನ ಹೇಗಿರಬೇಕು ಎಂಬುದನ್ನು ದಾಸವರೇಣ್ಯ ಶ್ರೀ ಪುರಂದರದಾಸರು ತಮ್ಮ 'ಸುಮ್ಮನೆ ಬರುವುದೆ ಮುಕ್ತಿ' ಎಂಬ ಕೀರ್ತನೆಯಲ್ಲಿ ತಿಳಿಸಿಕೊಡುತ್ತಾರೆ:

**ಮನದಲಿ ದೃಢವಿರಬೇಕು। ಪಾಪಿ**
**ಜನರ ಸಂಸರ್ಗವ ನೀಗಲು ಬೇಕು**

**ಅನುಮಾನವನು ಬಿಡಬೇಕು। ತನ್ನ**
**ತನು ಮನಧನವನ್ನೊಪ್ಪಿಸಿ ಕೊಡಬೇಕು ॥**

**ಕಾಮಕ್ರೋಧವ ಬಿಡಬೇಕು। ಪರ**
**ಕಾಮಿನಿಯರ ಹಂಬಲ ಬಿಡಬೇಕು**
**ಹೇಮದಾಸೆಯ ಸುಡಬೇಕು । ಹರಿ**
**ನಾಮ ಸಂಕೀರ್ತನೆಯನು ಮಾಡಬೇಕು ॥**

**ಹರಿಯೇ ಗುರುವೆನ್ನಬೇಕು ।ಶ್ರೀ**
**ಹರಿಯೇ ಪರದೈವವೆಂತೆನ್ನಬೇಕು**
**ಪರವಸ್ತು ಒಲ್ಲೆನಬೇಕು । ದೇಹ**
**ಸ್ಥಿರವಲ್ಲವೆಂತೆಂದು ತಿಳಿಯಲು ಬೇಕು ॥**

ಎಂದು ಹಾಡಿದ್ದಾರೆ. ಇಂತಹ ಭಗವತ್ಪ್ರಾಪ್ತಿಗೆ ಬೇಕಾದ ಜೀವನವು ನಿಯಮಗಳನ್ನು ಪಾಲಿಸಬೇಕಾದರೂ, ಅದಕ್ಕೂ ಅವನ ಕರುಣೆ ಅನುಗ್ರಹ ಬೇಕೇಬೇಕು. ಅದಕ್ಕಾಗಿ ಅನನ್ಯ ಶರಣ್ಯನಾದ ಅವನನ್ನೇ ನಮ್ಮ 'ಸಂಕಲ್ಪ'ವನ್ನು ಈಡೇರಿಸಲು,

**ದೃಷ್ಟಿ ನಿನ್ನ ಪಾದದಲ್ಲಿ ನೆಡೋ ಹಾಂಗೆ**
**ದುಷ್ಟ ಜನ ಸಂಗಗಳ ಬಿಡೋ ಹಾಂಗೆ ॥**

**ಕೆಟ್ಟ ಮಾತು ಕಿವಿ ಕೇಳದ್ಹಾಂಗೆ ಮನ**
**ಕಟ್ಟಿಸಯ್ಯ ನಿನ್ನ ಪಾದ ಬಿಡದ್ಹಾಂಗೆ ॥**

**ಭ್ರಷ್ಟನಾಗಿ ನಾಲ್ವರೊಳಗೆ ತಿರುಗದ್ಹಾಂಗೆ**
**ಶಿಷ್ಟಜನ ಸೇವೆಯನು ಮಾಡೋಹಾಂಗೇ ॥**

**ನಟ್ಟ ನೀರೊಳಗೆ ಈಸಲಾರೆ ನಾನು**
**ಕಟ್ಟೆ ಸೇರಿಸಬೇಕಯ್ಯ ನೀನು ॥**

ಎಂಬುದಾಗಿ ಪ್ರಾರ್ಥಿಸಬೇಕು.

ಈ ಎಲ್ಲ ಪೂರ್ವಭಾವೀ ಸಿದ್ಧತೆಯೊಡನೆ ಪ್ರಾರ್ಥನೆಯೂ ಸೇರಿದಾಗ ನಮ್ಮ 'ಸಂಕಲ್ಪ'ವನ್ನು ಈಡೇರಿಸಲು ಪರಮಾತ್ಮನೂ ಸಂಕಲ್ಪಿಸುತ್ತಾನೆ. ಅದುವರೆಗೂ ಅವನ ಕರುಣೆಗೆ ಪಾತ್ರರಾಗಲು ಅವನು ಹೇಳಿರುವ ಧರ್ಮಾಚರಣೆಯನ್ನು ಪಾಲಿಸುತ್ತಾ ನೀತಿವಂತರಾಗಿ ನಡೆದುಕೊಳ್ಳಬೇಕು. ಪ್ರಪನ್ನನಾದವನು ಆಚರಿಸುವ ನಡೆ, ನುಡಿ, ಆಚಾರಗಳನ್ನು 'ಉತ್ತರಕೃತ್ಯ' ಎಂದು ಕರೆಯುತ್ತಾರೆ.

**೨. ಪ್ರಾತಿಕೂಲ್ಯಸ್ಯ ವರ್ಜನಮ್:** ಭಗವದ್ಧ್ಯಾನಕ್ಕೆ ಪ್ರತಿಕೂಲವಾದ ವಸ್ತು ಅಥವಾ ವ್ಯಕ್ತಿಯಾಗಲೀ ಅದನ್ನು ವರ್ಜಿಸಬೇಕು. ನಾವು ಭಗವತ್ಪ್ರಾಪ್ತಿಗೆ ಅನುಕೂಲಕರ ಜೀವನವನ್ನು ನಡೆಸುವೆವೆಂಬ ಸಂಕಲ್ಪ ಪ್ರಾಮಾಣಿಕವೂ, ಪರಿಶುದ್ಧವೂ ಆಗಿದ್ದರೆ ಅದಕ್ಕೆ ಪ್ರತಿಕೂಲವಾದದ್ದೆಲ್ಲಾ ಸಹಜವಾಗಿಯೇ ದೂರ ಹೋಗಲೇಬೇಕು.

ಯಾರು ಶ್ರೀಹರಿಗೆ ಪ್ರಿಯರಲ್ಲವೋ ಅವರು ಎಷ್ಟೇ ಹತ್ತಿರದ ರಕ್ತ ಸಂಬಂಧಿಗಳೇ ಆಗಿದ್ದರೂ ಅವರನ್ನು ತನ್ನ ಆಜನ್ಮ ವೈರಿಗಳೆಂದು ತಿಳಿದು, ಅವರನ್ನು ವರ್ಜಿಸಬೇಕು ಎಂದು ಗೋಸ್ವಾಮಿ ತುಳಸೀದಾಸರು ಭಕ್ತೆ ಮೀರಾಬಾಯಿಗೆ ಪತ್ರದಲ್ಲಿ ಬರೆಯುತ್ತಾರೆ.

**ಜಾಕೇ ಪ್ರಿಯ ನ ರಾಮು ವೈದೇಹಿ ॥**

**ಸೋ ಛಾಡಿಯೇ ಕೋಟಿ ವೈರಿ ಸಮ**
**ಜದ್ಯಪಿ ಪರಮ ಸನೇಹೀ ॥**

**ತಜ್ಯೋ ಪಿತಾ ಪ್ರಹ್ಲಾದ ವಿಭೀಷಣ**
**ಬಂಧು ಭರತ ಮಹತಾರೀ**
**ಬಲಿ ರುರು ತಜ್ಯೋ ಕಂತ ಬ್ರಜ ಬನಿತನಿ**
**ಭಯೇ ಮುದ ಮಂಗಲಕಾರೀ ॥**

**ನಾತೇ ನೇಹ ರಾಮಕೇ ಮುನಿಯತ**
**ಸುಹೃದ ಸುಸೇವ್ಯ ಜಹಾ ಲೌ**
**ಅಂಜನ ಕಹಾ ಆಂಖಿ ಜೇಹಿ ಫೂಟೈ**
**ಬಹುತಕ ಕಹಾ ಕಹಾಲ್ ॥**

**ತುಲಸೀ ಸೋ ಸಬ ಭಾತಿ ಪರಮಹಿತ**
**ಪೂಜ್ಯ ಪ್ರಾಣತೇ ಪ್ಯಾರೋ**
**ಜಾಸೋ ಹೋಯ್ ಸನೇಹ ರಾಮಪದ**
**ಏತೋ ಮತೋ ಹಮಾರೋ ॥**

ಎಂದರೆ, ''ತಂಗಿ ಮೀರಾ, ಯಾರು ಸೀತಾರಾಮರಿಗೆ ಪ್ರಿಯರಲ್ಲವೋ, ಅವರು ಎಷ್ಟೇ ಆತ್ಮೀಯರಾಗಿದ್ದರೂ ಅವರೇ ನಮ್ಮ ಆಜನ್ಮ ವೈರಿಗಳೆಂದೇ ತಿಳಿದು ಅವರನ್ನು ತ್ಯಜಿಸಬೇಕು.

''ಪ್ರಹ್ಲಾದನು ತನ್ನ ತಂದೆಯನ್ನೂ, ವಿಭೀಷಣನು ತನ್ನ ಅಣ್ಣನನ್ನೂ, ಭರತನು ತನ್ನ ತಾಯಿಯನ್ನೂ, ಬಲಿಚಕ್ರವರ್ತಿ ತನ್ನ ಗುರು ಶುಕ್ರಾಚಾರ್ಯರನ್ನೂ, ಗೋಪಿಯರು ತಮ್ಮ ಪತಿಗಳನ್ನೂ ತ್ಯಜಿಸಿ ಪರಮ ಮಂಗಳವಾದುದನ್ನೇ ಪಡೆದರು.

''ಯಾರಿಗೆ ಶ್ರೀರಾಮನಲ್ಲಿ ಸ್ನೇಹ ಪ್ರೀತಿ ಗೌರವಗಳಿಲ್ಲವೋ, ಯಾರಿಗೆ ಶ್ರೀರಾಮನಲ್ಲಿ ಸಹೃದಯತೆ ಸೇವಾಮನೋಭಾವಗಳಿಲ್ಲವೋ, ಎರಡು ಕಣ್ಣುಗಳೂ ಒಡೆದು ದೃಷ್ಟಿಹೀನವಾದವರಿಗೆ ಅಂಜನ ಹಾಕುವುದು ಹೇಗೆ ಪ್ರಯೋಜನವಿಲ್ಲವೋ ಹಾಗೆಯೇ ಇಂತಹವರಿಗೆ ಉಪದೇಶ ಮಾಡಿ ಪ್ರಯೋಜನವಿಲ್ಲ.

''ಯಾರಿಗೆ ಶ್ರೀರಾಮನಲ್ಲಿ ಸುದೃಢ ಸ್ನೇಹವಿದೆಯೋ ಅವನನ್ನು ನಾನು ಪರಮಹಿತನೂ, ಪೂಜ್ಯನೂ ಪ್ರಾಣಪ್ರಿಯನೂ ಎಂದು ತಿಳಿಯುತ್ತೇನೆ'' – ಎಂಬುದಾಗಿ 'ಪ್ರಾತಿಕೂಲ್ಯಸ್ಯ ವರ್ಜನಂ' ಹೇಗೆ ಮಾಡಬೇಕೆಂದು ತುಲಸೀದಾಸರು ಹೇಳುತ್ತಾರೆ.

ಭಗವಂತನನ್ನು ಪ್ರೀತಿಸಲು ಅಡ್ಡಿಯಾಗುವ ಕೇಡಿಗರ ಸಂಗ ಮಾಡಬಾರದು. ಅವರು ಎಂತಹ ಪಂಡಿತರೂ ಪರಾಕ್ರಮಿಗಳೂ ಆಗಿದ್ದರೂ ಭಗವಂತನ ಸ್ನೇಹರಹಿತರಾಗಿದ್ದರೆ ಅವರೆಲ್ಲರೂ ತ್ಯಾಜ್ಯರು. ನಾವು ಧರ್ಮವನ್ನಾಚರಿಸುವುದು ಎಷ್ಟು ಮುಖ್ಯವೋ, ಅಧರ್ಮವನ್ನು ಪ್ರತಿಭಟಿಸುವುದೂ ಅಷ್ಟೇ ಮುಖ್ಯ. ಕೆಟ್ಟದ್ದನ್ನು, ಕೆಟ್ಟವರನ್ನು ಕ್ರಿಯಾತ್ಮಕವಾಗಿ ಪ್ರತೀಕಾರ ಬುದ್ಧಿಯಿಲ್ಲದೆ ಪ್ರತಿಭಟಿಸುವುದೇ ಅಸಹಕಾರದ ಲಕ್ಷಣ. ಅಸಹಕಾರವೆಂದರೆ ಕೆಟ್ಟದರ ವಿರುದ್ಧ ಹೋರಾಡುವುದು, ಒಳ್ಳೆಯ ಕಾರ್ಯಕ್ಕೆ ಸಹಕಾರ ಮಾಡುವುದು. ವಿಭೀಷಣನ ಅಸಹಕಾರ ಈ ರೀತಿಯದು.

ನಾವು 'ಪ್ರಾತಿಕೂಲ್ಯಸ್ಯ ವರ್ಜನಂ' ಮಾಡಿದಾಗ ಸಹಜವಾಗಿಯೇ 'ಆನುಕೂಲ್ಯಸ್ಯ ಸಂಕಲ್ಪ' ಆಗುವುದು. ಯಾವುದಾದರೂ ಸದ್ಗುಣವನ್ನು ನಿಷ್ಠೆಯಿಂದ ಪಾಲಿಸಿದರೆ ಎಲ್ಲಾ ದುರ್ಗುಣಗಳಿಂದಲೂ ನಾವು ಬಿಡುಗಡೆ ಹೊಂದುವುದು ಸಾಧ್ಯ.

ಇಂತಹ 'ಪ್ರಾತಿಕೂಲ್ಯಸ್ಯ ವರ್ಜನಂ' ಗಾಗಿ ಕೃಷ್ಣನ ಪರಮ ಭಕ್ತರಾದ ಶ್ರೀ ಕನಕದಾಸರು,

**ಸಜ್ಜನರ ಸಂಗದೊಳಿರಿಸೆನ್ನ ರಂಗ**
**ದುರ್ಜನರ ಸಂಗ ನಾನೊಲ್ಲೆ ಮಂಗಳಾಂಗ ॥**

**ಕೂಡಿದ ಸಭೆಯಲಿ ಕುತ್ಸಿತವ ನುಡಿವನ ಸಂಗ**
**ನಾಡಿನೊಳಗನ್ಯಾಯ ಮಾಡುವನ ಸಂಗ**
**ಬೇಡಿದರೂ ಕೊಡದಿರುವ ಕಡು ಲೋಭಿಯ ಸಂಗ**
**ಮೂಢಮೂರ್ಖರ ಸಂಗ ಬಲು ಭಂಗ ಎಲೋ ರಂಗ ॥**

**ಗುರುಸತಿಗೆ ಪರಸತಿಗೆ ಎರಡು ಬಗೆವರ ಸಂಗ**
**ಗುರುನಿಂದೆ ಪರನಿಂದೆ ಮಾಡುವರ ಸಂಗ**
**ಪರಹಿತಾರ್ಥದ ಧರ್ಮವರಿಯದವರ ಸಂಗ**
**ಮರುಳ ಪಾಮರ ಸಂಗ ಬಲು ಭಂಗ ಎಲೋ ರಂಗ ॥**

ಎಂಬುದಾಗಿ ಹಾಡುತ್ತಾ ಕೇಶವನ ಅಂಘ್ರಿ ನೆನೆಯದವರ ಸಂಗದಿಂದ ದೂರವಿರಿಸಲು ಹೃದಯ ತುಂಬಿ ಪ್ರಾರ್ಥಿಸುತ್ತಾರೆ.

**೩. ರಕ್ಷಿಷ್ಯತೀತಿ ವಿಶ್ವಾಸಃ** ಭಕ್ತರು ದೇವರಲ್ಲಿ ಇಡುವ ವಿಶ್ವಾಸವು ಬರಿಯ ನಂಬಿಕೆಯಲ್ಲ , ಅದು ಶ್ರದ್ಧೆ. ವಾಹನದಲ್ಲಿ ಒಂದು ಊರಿನಿಂದ ಮತ್ತೊಂದು ಊರಿಗೆ ಪ್ರಯಾಣ ಮಾಡುವ ವ್ಯಕ್ತಿ, ಚಾಲಕ ತನ್ನನ್ನು ಸುರಕ್ಷಿತವಾಗಿ ಗುರಿಮುಟ್ಟಿಸುವನೆಂಬ ವಿಶ್ವಾಸವಿಟ್ಟುಕೊಂಡೇ ಪ್ರಯಾಣ ಮಾಡುತ್ತಾನೆ. ಹೀಗಿರುವಾಗ ಜಗಚ್ಚಾಲಕನಾದ ಪರಮಾತ್ಮನಲ್ಲಿ ವಿಶ್ವಾಸ ಬೇಡವೆ? ನಾವು ಅನಾರೋಗ್ಯದಿಂದ ಪೀಡಿತರಾದಾಗ ವೈದ್ಯನ ಬಳಿ ಹೋಗಿ, ಅವನು ನೀಡುವ ಔಷಧಿಗಳನ್ನು ಸಂಶಯಪಡದೆ ಸೇವಿಸಿ, ಚಿಕಿತ್ಸೆಗೆ ನಮ್ಮನ್ನು ಒಪ್ಪಿಸಿಕೊಳ್ಳುತ್ತೇವೆ. ಹೀಗಿರುವಾಗ ಭವರೋಗ ವೈದ್ಯನಾದ ಭಗವಂತನ ಬಳಿ ಭೀತಿ ಏಕೆ? 'ಅನಾದಿಕಾಲದ ಭವರೋಗ ಕಳೆಯಯ್ಯಾ' ಎಂದು ಪ್ರಾರ್ಥಿಸೋಣ.

ಪರಮಾತ್ಮ ಶರಣಾಗತರನ್ನು ರಕ್ಷಿಸಿಯೇ ರಕ್ಷಿಸುವನೆಂಬ ದೃಢ ವಿಶ್ವಾಸವುಳ್ಳ ಭಕ್ತರು, ಆಪತ್ತಿಗಾಗುವ ಈ ನಂಟ ಹಿಂದೆ ಮಹಾ ವಿಪತ್ತಿಗೊಳಗಾಗಿದ್ದ ತನ್ನ ಭಕ್ತರನ್ನು ಹೇಗೆ ರಕ್ಷಿಸಿದ ಎಂದು ಶ್ರೀ ವಿಜಯದಾಸರು ಭಕ್ತಿ ಪರವಶರಾಗಿ ಹಾಡುತ್ತಾರೆ:

**ಆವ ಪಿತನು ಸಾಕಿದನು ಪ್ರಹ್ಲಾದನ್ನ**
**ಆವ ಜನನಿ ಸಾಕಿದಳು ಧ್ರುವನ್ನ**
**ಆವ ಅಣ್ಣ ಸಾಕಿದನು ವಿಭೀಷಣನ್ನ**
**ಆವ ಪುರುಷ ಸಾಕಿದ ಪಾಂಚಾಲಿಯ**

**ಆವ ಬಂಧು ಸಾಕಿದ ಪರೀಕ್ಷಿತನ್ನ**
**ಆವ ದೈವ ಸಾಕಿತು ಗಜೇಂದ್ರನ್ನ**
**ಆವ ಧೀರ ಸಾಕಿದ ಫಲ್ಗುಣನ್ನ**
**ಆವ ಜಾತಿ ಸಾಕಿತು ಅಜಾಮಿಳನ**

– ಎಂದು ಹಾಡುತ್ತಾ, ಇವರೆಲ್ಲರನ್ನೂ ಆಪತ್ತಿನಲ್ಲಿ ರಕ್ಷಿಸುವವನು ಶ್ರೀಹರಿಯಲ್ಲದೆ ಬೇರಾರೂ ಅಲ್ಲ, 'ನೋವು ಕಳೆದು ಭಕುತಾವಳಿಗೆ ವೇಗವಾಗಿ ಕೈವಲ್ಯ ಪಾಲಿಪ ದೇವ ಶ್ರೀಮನ್ನಾರಯಣನಲ್ಲದೆ ಇನ್ನಾರೂ ಅಲ್ಲ' ಎಂಬ ದೃಢವಿಶ್ವಾಸ ಶ್ರೀ ವಿಜಯದಾಸರದು.

ಭಗವಂತನಲ್ಲಿ ಶರಣಾದವನಿಗೆ ತಂದೆ ತಾಯಿ ಬಂಧು ಬಳಗ ಕುಲಗೋತ್ರ ಸರ್ವಸ್ವವೂ ಅವನ ಆರಾಧ್ಯದೈವ. ಆದ್ದರಿಂದ ದೇವರಲ್ಲಿ ವಿಶ್ವಾಸವೆಂದರೆ ಯಾವ ಸಂಶಯವೂ ಇಲ್ಲದೆ ದೇವರನ್ನು ನಂಬುವುದು. 'ಅನ್ಯಥಾ ಶರಣಂ ನಾಸ್ತಿ' ಎಂದು ಶರಣಾಗುವ ಭಕ್ತನಿಗೆ 'ಅಹಂ ತ್ವಾ ಸರ್ವಪಾಪೇಭ್ಯೋ ಮೋಕ್ಷಯಿಷ್ಯಾಮಿ' ಎಂದು ಭಗವಂತನು ಅಭಯ ನೀಡುತ್ತಾನೆ. ಈ ಮಾತು ದ್ವಾಪರ ಯುಗದಲ್ಲಿ ಶ್ರೀ ಕೃಷ್ಣ ಪರಮಾತ್ಮನು ನೀಡುವ ಅಭಯ. ಇದನ್ನೇ ತ್ರೇತಾಯುಗದಲ್ಲಿ ಶ್ರೀರಾಮಚಂದ್ರಮೂರ್ತಿಯು,

**ಸಕೃದೇವ ಪ್ರಪನ್ನಾಯ ತವಾಸ್ಮೀತಿ ಚ ಯಾಚತೇ ।**
**ಅಭಯಂ ಸರ್ವಭೂತೇಭ್ಯೋ ದದಾಮ್ಯೇತತ್ ವ್ರತಂ ಮಮ ॥**

*(ರಾಮಾಯಣ, ಯುದ್ಧಕಾಂಡ, ಸರ್ಗ: ೮–೩೩)*

''ಯಾರು ಒಂದೇ ಒಂದು ಬಾರಿ ಶರಣಾಗತನಾಗಿ 'ಪ್ರಭುವೇ! ನಾನು ನಿನ್ನವನು ನನ್ನನ್ನು ರಕ್ಷಿಸು' ಎಂದು ಯಾಚಿಸುವನೋ ಅಂತಹವನಿಗೆ ಸಮಸ್ತ ಪ್ರಾಣಿಗಳ ದೆಸೆಯಿಂದಲೂ ನಾನು ಅಭಯವನ್ನು ನೀಡುತ್ತೇನೆ ಇದು ನನ್ನ ವ್ರತ'' ಎನ್ನುತ್ತಾನೆ.

ಪರಮಾತ್ಮನು ತಾನೇ ರಚಿಸಿರುವ ಈ ಸೃಷ್ಟಿಯಲ್ಲಿ ಸಮಸ್ತ ಚರಾಚರಾವಸ್ತುಗಳೆಲ್ಲವೂ ಅವನದೇ ಆಗಿರುವಾಗ, ಅವುಗಳೆಲ್ಲದರ ಯೋಗಕ್ಷೇಮ ಅವನಿಗೇ ಸೇರಿದುದಲ್ಲವೇ?

ಅಣುವಿನಿಂದ ಮಹತ್ತಿನವರೆಗೂ ಅಭಯ ನೀಡುವ ದೈವ ನಮ್ಮ ಬಳಿ ಇರುವಾಗ ನಾವು ತಲ್ಲಣಿಸಬೇಕಾದ ಆವಶ್ಯಕತೆಯೇ ಇಲ್ಲವೆಂದು ಶ್ರೀ ಕನಕದಾಸರು ಸುಂದರವಾಗಿ ಹಾಡುತ್ತಾರೆ:

**ತಲ್ಲಣಿಸದಿರು ಕಂಡ್ಯ ತಾಳು ಮನವೇ**
**ಎಲ್ಲರನು ಸಲಹುವನು ಇದಕೆ ಸಂಶಯವಿಲ್ಲ ॥**

**ಬೆಟ್ಟದ ತುದಿಯಲ್ಲಿ ಹುಟ್ಟಿರುವ ವೃಕ್ಷಕ್ಕೆ**
**ಕಟ್ಟೆಯನು ಕಟ್ಟಿ ನೀರೆರೆದವರು ಯಾರೋ**
**ಪುಟ್ಟಿಸಿದ ಸ್ವಾಮಿ ತಾ ಹೊಣೆಗಾರನಾಗಿರಲು**
**ಘಟ್ಟ್ಯಾಗಿ ಸಲಹುವನು ಇದಕೆ ಸಂಶಯ ಬೇಡ ॥**

**ಅಡವಿಯೊಳಗಾಡುವ ಮೃಗ ಪಕ್ಷಿಗಳಿಗೆಲ್ಲ**
**ಅಡಿಗಡಿಗೆ ಆಹಾರವಿತ್ತವರು ಯಾರೋ**
**ಪಡೆದ ಜನನಿಯ ತೆರದಿ ಸ್ವಾಮಿ ಹೊಣೆಗೀಡಾಗಿ**
**ಬಿಡದೆ ರಕ್ಷಿಪನಿದಕೆ ಸಂದೇಹ ಬೇಡ ॥**

**ಕಲ್ಲೊಳಗೆ ಹುಟ್ಟಿರುವ ಕ್ರಿಮಿ ಕೀಟಗಳಿಗೆಲ್ಲ**
**ಅಲ್ಲಲ್ಲಿಗಾಹಾರ ವಿತ್ತವರು ಯಾರೋ**
**ಫುಲ್ಲಲೋಚನ ಕಾಗಿನೆಲೆಯಾದಿ ಕೇಶವನು**
**ಎಲ್ಲರನು ಸಲಹುವನು ಇದಕೆ ಸಂಶಯ ಬೇಡ॥**

'ರಕ್ಷಿಷ್ಯತೀತಿ ವಿಶ್ವಾಸಃ' ಎಂಬ ಭಾವವನ್ನಿಲ್ಲಿ ಸ್ಪಷ್ಟೀಕರಿಸುತ್ತಾರೆ.

**೪. ಗೋಪೃತ್ವ ವರಣಂ :** ಸರ್ವಲೋಕ ಶರಣ್ಯನಾದ ಶ್ರೀಹರಿಯೇ ಗತಿ ಎಂಬ ಸ್ಥಿರತೆಯೊಡನೆ ಭಗವಂತ ನನ್ನನ್ನು ತನ್ನವನನ್ನಾಗಿ ಸ್ವೀಕರಿಸಿದ್ದಾನೆ ಎಂಬ ದೃಢಭಾವದಿಂದ ಭಕ್ತ ನಿಶ್ಚಿಂತನಾಗುತ್ತಾನೆ. ಅವನಲ್ಲಿ ಧೈರ್ಯ ಆತ್ಮವಿಶ್ವಾಸಗಳು ಮೂಡುತ್ತವೆ. ಈ ಸ್ಥಿರತೆಯನ್ನು ದಾಸವರೇಣ್ಯ ಶ್ರೀ ಪುರಂದರರು,

**ಕಾವದೈವವು ನೀನೆ, ಕೈಮುಗಿಯುವೆನು ನಾನು**
**ಕೈವಲ್ಯಫಲದಾತ ಕೇಶವನೆ ರಘುನಾಥ**
**ಯಾವ ದೈವಕ್ಕಿನ್ನು ಈ ವೈಭವಗಳು ಕಾಣೆ**
**ರಾಘವಾಂತಕ ನಮ್ಮ ಪುರಂದರ ವಿಠಲ**

ಎಂದು ಹಾಡುತ್ತಾರೆ. ಭಗವಂತನ ಸಾನ್ನಿಧ್ಯ ಸುಭದ್ರ ಕೋಟೆಯಂತೆ ನಮ್ಮನ್ನು ಎಲ್ಲ ವಿಧವಾದ ಶತ್ರುಗಳಿಂದಲೂ ರಕ್ಷಿಸುತ್ತದೆ. ನಿರ್ಭಯವಾಗಿ ನಿಶ್ಚಿಂತೆಯಿಂದ ಅವನ ಶ್ರೀಪಾದಗಳ ನೆರಳಿನಲ್ಲಿ ನಾವು ಜೀವಿಸಬಹುದು. ದೇವರು ತನ್ನನ್ನು ವರಣ ಮಾಡಿದ್ದಾನೆಂದ ಮೇಲೆ ತನಗೇನು ಕಡಿಮೆ ಎಂದ ಭಕ್ತನು ಭಾವಿಸುತ್ತಾನೆ. ಸಂತ ತುಕಾರಾಮರು ತಮ್ಮ ಒಂದು ಅಭಂಗದಲ್ಲಿ, ''ನಮಗೆ ನಮ್ಮ ಆಶ್ರಯದ ತಾವಾದ ಪಾಂಡುರಂಗನ ಚರಣದಲ್ಲಿ ಏನು ಕೊರತೆ ಇದೆ? ಅನಿತ್ಯವಾದ ವಿಷಯ ಸುಖಗಳ ದಾಸರು ನಾವಲ್ಲ. ವೈಕುಂಠವೇ ನಮ್ಮ ಮನೆಗೆ ಬಂದಿದೆ. ನಮ್ಮ ವಾಸಸ್ಥಳ ವೈಕುಂಠನಗರಿ'' ಎನ್ನುತ್ತಾರೆ.

ತನ್ನ ರಕ್ಷಣೆಯ ಭಾರವನ್ನು ಯಾರು ಭಗವಂತನಿಗೆ ಒಪ್ಪಿಸಿ ಕೊಡುತ್ತಾನೋ ಅಂತಹವನನ್ನು ಪರಮಾತ್ಮ ಎಂದಿಗೂ ಉಪೇಕ್ಷಿಸುವುದಿಲ್ಲ. ಏಕೆಂದರೆ ರಕ್ಷಣೆ, ಗೋಪನೆ ಸಂಗೋಪನೆ ಎಲ್ಲವೂ ಅವನದೇ. ಸೃಷ್ಟಿಯ ಕೋಟಿ ಕೋಟಿ ಜೀವರನ್ನು ಸಲಹುವ ಪರಮಾತ್ಮನು ಎಲ್ಲರನ್ನೂ ರಕ್ಷಿಸುತ್ತಾನೆ ಎಂಬ ಸ್ಥಿರ ಭಾವವನ್ನು ಹೊಂದಿ ನೆಮ್ಮದಿಯಿಂದಿರಬೇಕು.

**೫. ಆತ್ಮನಿಕ್ಷೇಪ**

ಶರಣಾಗತಿಯ ಐದನೆಯ ಸ್ಥಿತಿ ಆತ್ಮನಿಕ್ಷೇಪ. ನಮ್ಮನ್ನು ಕಾಯಾ ವಾಚಾ ಮನಸಾ ಸಂಪೂರ್ಣವಾಗಿ ಭಗವಂತನಿಗೆ ಒಪ್ಪಿಸಿಕೊಂಡು ಬಿಡುವುದು ಆತ್ಮನಿಕ್ಷೇಪ. ಹಾನಿ, ವೃದ್ಧಿ ಎಲ್ಲವೂ ಅವನಿಚ್ಛೆಯಂತೆಯೇ ನಡೆಯುವುದು ಎಂದು ನೆಮ್ಮದಿಯಿಂದಿರುವ ಭಕ್ತನು ಈ ರೀತಿ ಪ್ರಾರ್ಥಿಸುತ್ತಾನೆ:

**ಎಲ್ಲವೂ ನಿನ್ನಿಚ್ಛೆಯಂತೆ ನಡೆದಿರಲು**
**ನೀನೆ ಭವ ಸಾಗರವ ದಾಟಿಸುವ ಹಡಗು**
**ನಿನ್ನ ಇಚ್ಛೆಯ ನೀನು ಪೂರೈಸುತಿರಲು**